

# ಸಂಗೀತ-ಯೋಗ

**ಶಶಿಕಲಾ ಶ್ರೀಧರ್**

**ಸಂಗೀತ ಕೇವಲ ಮನರಂಜನೆಗಾಗಿ ಅಲ್ಲ, ಅದೊಂದು ಆಧ್ಯಾತ್ಮಿಕ ಸಾಧನೆಯೂ ಆಗಿ ಅಧ್ಯಾತ್ಮ ಸಿದ್ಧಿಯನ್ನು ಪಡೆಯಲು ನೆರವಾಗಬಲ್ಲದು ಎಂಬ ಅಂಶವನ್ನು ಸಂಗೀತ ಶಾಸ್ತ್ರದ ಹಿನ್ನೆಲೆಯಲ್ಲಿ ವಿವರಿಸಿರುವ ಶ್ರೀಮತಿ ಶಶಿಕಲಾ ಶ್ರೀಧರ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.**

**ಸಂಗೀತ** ಎಂದರೇನು? ಸಂಗೀತಕ್ಕೂ ಅಧ್ಯಾತ್ಮಕ್ಕೂ ಇರುವ ಸಂಬಂಧವೇನು? ಸಂಗೀತದಿಂದ ಮನಸ್ಸಿನ ಮೇಲೆ ಆಗುವ ಪರಿಣಾಮವೇನು? ಸಂಗೀತ ಆಧ್ಯಾತ್ಮಿಕವಾಗಿ ಮುನ್ನಡೆಯುತ್ತಿರುವ ಸಾಧಕನಿಗೆ ಮಾಡುವ ಸಹಾಯವೇನು? ನಾದದಿಂದ ಕೂಡಿದ ಗೀತೆ ನಾದಯೋಗವಾಗಲು ಸಾಧ್ಯವಿಲ್ಲವೇನು?—ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನಮ್ಮ ಭಾರತದ ಶಾಸ್ತ್ರೀಯ ಸಂಗೀತದಲ್ಲಿದೆ.

ಸಂಗೀತ ಎಂಬ ಪದದ ವಿಶ್ಲೇಷಣೆ ಏನು? ಸಂಗೀತ ಎಂಬ ಸುಂದರ ಸಂಸ್ಕೃತ ಪದದ ಅರ್ಥವೇ **'ಸಮ್ಯಕ್ ಗೀತ'** ಎಂದರೆ ಯಾವುದು ಚೆನ್ನಾಗಿ ಹಾಡಲ್ಪಟ್ಟಿದೆಯೋ ಅದು ಎಂದರ್ಥ ; **ನೃತ್ಯಂ ಗೀತಂ ಚ ವಾದ್ಯಂ ಚ ತ್ರಯಂ ಸಂಗೀತಮುಚ್ಯತೇ** ಎಂದರೆ ಗೀತೆ, ವಾದ್ಯ, ನೃತ್ಯ ಇವು ಮೂರೂ ಸೇರಿ ಸಂಗೀತವೆನಿಸಕೊಳ್ಳುತ್ತದೆ. **ರಾಗಃ ಸ್ವರಶ್ಚ ತಾಳಶ್ಚ ತ್ರಿಭಿಃ ಸಂಗೀತಮುಚ್ಯತೇ**—ರಾಗ, ತಾಳ, ಸ್ವರಗಳಿಂದ ಕೂಡಿರುವುದು ಸಂಗೀತ—ಎಂದು ಮುಂತಾಗಿ ಸಂಗೀತದ ವಿವರಣೆಯಿದೆ.

ಚೆನ್ನಾಗಿ ಹಾಡಲ್ಪಟ್ಟ ಸಂಗೀತ ಎಂದರೇನು? ಒಂದು ದೊಡ್ಡ ಸಭೆಯಲ್ಲಿ, ಸಭಿಕರೆಲ್ಲರನ್ನು ರಂಜಿಸಿ, ಸಮಸ್ತ ಅಭಿನಯಗಳಿಂದ ಕೂಡಿ ಹಾಡಿ, ಚಪ್ಪಾಳೆ ಗಿಟ್ಟಿಸಿ ಕೀರ್ತಿ ಪಡೆಯಲು ಹಾಡಿದುದೇ? ಇದೇ ಸಂಗೀತದ ಗುರಿಯೇ? ಜನರಂಜನೆ ತಕ್ಕಮಟ್ಟಿಗೆ ಬೇಕಾದರೂ ಅದಕ್ಕಿಂತ ಮುಖ್ಯವಾದುದು ಮನರಂಜನೆ, ಅದಕ್ಕೂ ಮೇಲ್ಪಟ್ಟದ್ದು ಸಾಧಕನ ಸಾಧನೆಗೆ ಸಹಾಯಕವಾಗುವುದಾವುದೋ ಅದು. ಮನಸ್ಸಿನಾಳಕ್ಕೆ ಮುಳುಗಿ ಆತ್ಮಕ್ಕೆ ಆನಂದವನ್ನು ಯಾವುದು ಉಂಟುಮಾಡುವುದೋ ಅದು ಸಮ್ಯಕ್ ಗೀತೆ. ಇಂತಹ ಸಂಗೀತದಲ್ಲಿ ಸ್ವಯಂ ಭಗವಂತನೇ ಪ್ರತಿಷ್ಠಿತನಾಗಿರುತ್ತಾನೆ. ಮದ್ಭಕ್ತಾ ಯತ್ರ **ಗಾಯಂತಿ ತತ್ರ ತಿಷ್ಠಾಮಿ ನಾರದ** —'ನನ್ನ ಭಕ್ತರು ಎಲ್ಲಿ ಹಾಡುತ್ತಾರೋ ಅಲ್ಲಿ ನಾನಿರುತ್ತೇನೆ' ಎನ್ನುತ್ತಾನೆ ಪರಮಾತ್ಮ.

ಭಾರತೀಯ ಶಾಸ್ತ್ರೀಯ ಸಂಗೀತ **'ಭರತಸೂಚಿತ ಭಾವರಾಗ ತಾಳಃ'**—ಭಾವ, ರಾಗ, ತಾಳಗಳಿಂದ ಕೂಡಿದುದು, ಭರತ ಮುನಿಯಿಂದ ಕೀರ್ತಿಸಲ್ಪಟ್ಟುದು. ಭಾವೈಕ್ಯ ಆತ್ಮೈಕ್ಯವನ್ನುಂಟು ಮಾಡಿ, ಭಗವಂತನ ಸ್ತೋತ್ರಗಾನ ರೂಪವಾಗಿ ಭಾರತೀ ದೇವಿ ಯೆಡೆಗೆ ನಮ್ಮನ್ನೊಯ್ದು ನಿಲ್ಲಿಸುವುದೇ ಸಂಗೀತದ ಪರಮ ಶ್ರೇಷ್ಠ ಗುರಿ. ಇಂತಹ ಮಹತ್ತಾದ ಗುರಿಯನ್ನು ಆ ಸಂಗೀತ ಸಾಧಿಸ ಬೇಕಾದರೆ ಶಾರದೆಯ ಕೃಪೆಯಿಂದ ಮಾತ್ರವೇ ಸಾಧ್ಯ.

ಹೀಗೆ ಸಂಗೀತದ ಅರ್ಥ ವಿಶಾಲವಾದುದು, ವ್ಯಾಪಕವಾದುದು. ಅದರ ಶಕ್ತಿ ಅನಂತವಾದುದು. ಸಾಧಕನಿಗೆ ಅಪಾರವಾಗಿ ಸಹಾಯಕ ವಾದುದು. ಸರ್ವರೂ ಸರ್ವಕಾಲದಲ್ಲೂ ಆಸ್ವಾದಿಸುವಂತಹುದು. **ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ**—ಗಾನ ರಸವನ್ನು ಶಿಶುವೂ, ಪಶುವೂ ಸರ್ಪವೂ ಆಸ್ವಾದಿಸುತ್ತವೆ.

> **ಕಾಡ ಮೃಗವನೆ ಶಾಂತಗೊಳಿಸುವ ಚೆಲುವು**
> **ಶಿಲೆಯ ಮೃದುಗೊಳಿಸುವ ಒಲವು**
> **ಗಂಟುಗಂಟಿನ ಮರವ ಬಾಗಿಸುವ ಬಲವು**
> **ಹುದುಗಿಹುದು ಸಂಗೀತದಿ.**
>
> — **ಕಾಂಗ್ರೀವ್** ( *Congreve*)

ಋಷಿಗಳು ಧ್ಯಾನಯೋಗದಲ್ಲಿ ಕಂಡುಕೊಂಡ ಅನೇಕ ರಾಗಗಳು ಶಕ್ತಿಭರಿತವಾಗಿಯೂ, ಭಕ್ತಿಭರಿತವಾಗಿಯೂ ಇವೆ. ತ್ಯಾಗರಾಜಾದಿ ವಾಗ್ಗೇಯಕಾರರು ತಮ್ಮ ಜೀವನದಲ್ಲಿ ಸಂಗೀತಸಾಧನೆಯಿಂದ ನಾದ ಯೋಗವನ್ನು ಪಡೆದು ತೋರಿರುವ ಜ್ವಲಂತ ಉದಾಹರಣೆಗಳಿವೆ. ಬರಿಯ ಶಬ್ದಗಳ ಆರ್ಭಟದಿಂದ ಕೂಡಿ ಶ್ರುತಿಲಯ ತಪ್ಪಿ, ಸಾಹಿತ್ಯ ವನ್ನು ಹಿಂಡಿ, ಮಾಧುರ್ಯ ಮರೆತು ಕಿರುಚಿ ಹಾಡಿದರೆ ಅದು ಗಾರ್ದಭ ಗೀತೆ, ಸಂಗೀತವಲ್ಲ.

ಭಾರತೀಯ ಶಾಸ್ತ್ರೀಯ ಸಂಗೀತ ಬಹು ವಿಸ್ತಾರವಾದುದು. ಭಾವ ರಾಗ ತಾಳಗಳಿಂದ ಕೂಡಿ ಕರ್ಣಗಳಿಗೆ ಮಧುರವಾಗಿಯೂ ಮನೋಹರವಾಗಿಯೂ ತಪ್ತಜೀವಕ್ಕೆ ತಂಪನ್ನುಂಟುಮಾಡು ವಂತಹುದೂ ಆಗಿ ಆತ್ಮನನ್ನು ಪರಮಾತ್ಮನಲ್ಲಿ ಮಿಲನಗೊಳಿಸುವ ಮಹಾಶಕ್ತಿ ಸಂಗೀತಕ್ಕಿದೆ. ಇಂತಹ ಒಂದು ನಿಜವಾದ ಸಂಗೀತ ದಿಂದಾಗುವ ಪರಿಣಾಮವೇನು ಎಂಬುದನ್ನು 'ಸೂತಸಂಹಿತೆ'ಯಲ್ಲಿ **ಸಾಕ್ಷಾತ್ ಕೃಷ್ಣ** ಪರಮಾತ್ಮನೇ ಹೇಳಿದ್ದಾನೆ :

> **ಗೀತಗಾನೇನ ಯೋಗಃ ಸ್ಯಾತ್ ಯೋಗಾದೇವ ಶಿವೈಕ್ಯತಾ।**
> **ಗೀತಜ್ಞೋ ಯದಿ ಯೋಗೇನ ಸ ಯಾತಿ ಪರಮೇಶ್ವರಮ್॥**

'ಗೀತೆಯ ಗಾನದಿಂದ ಯೋಗವುಂಟಾಗುತ್ತದೆ, ಯೋಗದಿಂದ ಶಿವೈಕ್ಯತೆ. ಗೀತೆ ಬಲ್ಲವನು ಯೋಗದಿಂದಲೂ ಕೂಡಿದ್ದರೆ ಅವನು ಪರಮೇಶ್ವರನನ್ನು ಪಡೆಯುತ್ತಾನೆ.' ಭಕ್ತಿಯಿಂದ ದೇವರನ್ನು ಕುರಿತು ಗಾನ ಮಾಡುವವನಿಗೆ ಚಿತ್ತೈಕಾಗ್ರತೆ ಉಂಟಾಗುತ್ತದೆ. ಇದು ಯೋಗ ವೆನಿಸಿಕೊಳ್ಳುತ್ತದೆ. ಈ ಯೋಗದಿಂದ ಪರಮಾತ್ಮನಲ್ಲಿ ಐಕ್ಯವಾಗ ಬಹುದು. ಆದ್ದರಿಂದ ಸಂಗೀತದಿಂದ ಪಡೆಯುವ ಪರಮಶ್ರೇಷ್ಠ ಫಲವೇ ಪರಮಾತ್ಮ. ಆದ್ದರಿಂದ ಮನಸ್ಸಿನ ಮೇಲೆ ಪರಮಾತ್ಮನ ಸ್ವರೂಪವನ್ನು ಅಚ್ಚಳಿಯದಂತೆ ಉಳಿಸುವುದೇ ಸಂಗೀತದಿಂದ ಆಗ ಬೇಕಾದ ಪರಿಣಾಮ. ಇದನ್ನು ಸಾಧಿಸಿರುವ ಶ್ರೀತ್ಯಾಗರಾಜಾದಿ ಸಂಗೀತಸಾಧಕರು ಪರಮಭಕ್ತರು, ಪರಮ ಜ್ಞಾನಿಗಳು, ಪರಮಾತ್ಮ ನನ್ನು ಪ್ರತ್ಯಕ್ಷ ಕಂಡು ಸ್ತೋತ್ರದಿಂದಲೂ ಗಾನದಿಂದಲೂ ಸ್ತುತಿಗೈದ ಪರಮಪಾವನ ಜೀವರು. ನಮ್ಮ ದೇಶದಲ್ಲಿ ಇಂತಹ ಸಂಗೀತಯೋಗ ಬಲ್ಲ ಸಹಸ್ರಾರು ಮಂದಿ ತಮ್ಮ ಸುಮಧುರ ಸಂಗೀತದಿಂದ ಅಮರರಾಗಿದ್ದಾರೆ.

ನ ನಾದೇನ ವಿನಾ ಗೀತಂ ನ ನಾದೇನ ವಿನಾ ಸ್ವರಾಃ |
ನ ನಾದೇನ ವಿನಾ ನೃತ್ಯಂ ತಸ್ಮಾನ್ನಾದಾತ್ಮಕಂ ಜಗತ್ ||
*(ಸಂಗೀತ ರತ್ನಾಕರ)*

'ನಾದವಿಲ್ಲದೆ ಗೀತವಿಲ್ಲ, ನಾದವಿಲ್ಲದೆ ಸ್ವರಗಳಿಲ್ಲ, ನಾದ ವಿಲ್ಲದೆ ನೃತ್ಯವಿಲ್ಲ. ಆದ್ದರಿಂದ ಜಗತ್ತು ನಾದಾತ್ಮಕ.' ಗೀತೆ ಮೂಲ ದಲ್ಲಿ ನಾದರೂಪವಾಗಿತ್ತು. 'ನಾದತನುಮನಿಶಂ ಶಂಕರಂ ನಮಾಮಿ' (ನಾದಶರೀರಿಯಾದ ಶಂಕರನನ್ನು ಯಾವಾಗಲೂ ನಮಿಸುತ್ತೇನೆ) ಎಂಬ ಉಕ್ತಿಯಂತೆ ಅದು ಶಂಕರನನ್ನು ಆಶ್ರಯಿಸಿರುತ್ತದೆ. ಅದೇ ಮುಂದೆ ಸಪ್ತಸ್ವರಗಳಾಗಿ ವಿಭಾಗವಾಗಿ, ಈ ಸಪ್ತಸ್ವರಗಳ ಮೂಲಕ ರಾಗರಾಗಿಣಿ ರೂಪವನ್ನು ತಾಳಿ ಬಂದಿದೆ. ಇಂತಹ ನಾನಾ ರಾಗಗಳು ಹೊರಗೆ ಶಬ್ದರೂಪದಿಂದಲೂ ಮೂಡಿಬರಲು ಅನೇಕ ಮಾಧ್ಯಮ ಗಳಿವೆ. ಅದು ಉತ್ತಮ ಶಾರೀರರೂಪದಲ್ಲಿರಬಹುದು, ವೀಣೆ ವೇಣುವೇ ಮೊದಲಾದ ವಾದ್ಯರೂಪದಲ್ಲಾದರೂ ಇರಬಹುದು. ಆದ್ದರಿಂದ ಶಾರೀರ ಅಥವಾ ವಾದ್ಯಗಳು ಸಂಗೀತ ಸೌಧದ ಸೋಪಾನ ಗಳು. ಇವುಗಳ ಸಹಾಯದಿಂದ ಸಾಧನೆ ಮಾಡುತ್ತಾ ಹೋದರೆ ಸಂಗೀತ ಸೌಧವನ್ನೇರಿ, ಅಲ್ಲಿ ನಾದ ಪೀಠದ ಮೇಲೆ ಕುಳಿತು ಸಪ್ತಸ್ವರ ಗಳೆಂಬ ದೇವತೆಗಳಿಂದ ಕೀರ್ತಿಸಲ್ಪಡುತ್ತಿರುವ ಭಾರತೀದೇವಿಯ ದರ್ಶನಾನುಭವ ಪ್ರಾಮಾಣಿಕ ಸಾಧಕರಿಗೆ ಸರ್ವಕಾಲದಲ್ಲೂ ಸಾಧ್ಯ ವೆಂದು ಸಂಗೀತಶಾಸ್ತ್ರ ಸಾರುತ್ತದೆ.

ನಾದದಿಂದ ಸಪ್ತಸ್ವರ, ಸಪ್ತಸ್ವರಗಳಿಂದ ೭೨ ಮೇಳ ಕರ್ತರಾಗಗಳ ರಾಗಪಥಿಕಾ, ಇಲ್ಲಿಂದ ಮುಂದೆ ೧೨ ಚಕ್ರಗಳಿಂದ ಕೂಡಿದ ೭೨ ರಾಗಗಳು, ಈ ರಾಗಗಳಿಂದ ಜನಿತ ರಾಗಿಣಿಗಳು, ಈ ಎಲ್ಲ ರಾಗಗಳ ಲಕ್ಷಣಗಳು, ಇವುಗಳ ಕಾಲನಿರ್ಣಯ, ಈ ರಾಗಗಳ ರಸ, ಕಟ ಪಯಾದಿ ಸೂತ್ರ, ಯತಿ, ಪ್ರಾಣ, ಸ್ವರ, ವರ್ಣ, ಗೀತೆ, ಕೀರ್ತನೆ, ಕೃತಿ, ದೇವರ ನಾಮ ಮುಂತಾದ ಪಾಠಕ್ರಮ, ಶ್ರುತಿ, ಸ್ವರ, ಸ್ಥಾಯಿ, ರಾಗ, ಗಮಕ, ತಾಳ, ತಾಳಾಂಗಗಳು ಹೀಗೆ ಸಂಗೀತ ಸಾಮ್ರಾಜ್ಞಿ ಸರಸ್ವತಿ ಆಳುತ್ತಿರುವ ಸಂಗೀತ ಸಾಮ್ರಾಜ್ಯ ಅತ್ಯಂತ ವಿಸ್ತಾರ ವಾದುದು. ಇಂತಹ ದಿವ್ಯವಾದ ದೇವಗಾನವನ್ನು ಮರೆತು, ಜನಪ್ರಿಯ ಸಂಗೀತವನ್ನು ಹಾಡುವ ಅನೇಕ ಗಾಯಕರು ತಮ್ಮ ಗಾಯನದಲ್ಲಿ ೨೫ ದೋಷಗಳನ್ನು ಅಳವಡಿಸಿಕೊಂಡಿರುತ್ತಾರೆ. ಅವುಗಳು ೧. ಸಂದ್ರಷ್ಟ (ಹಲ್ಲು ಕಚ್ಚಿ ಹಾಡುವುದು) ೨. ಉದ್ಘೃಷ್ಟ (ರಸವಿಲ್ಲದ ಧ್ವನಿಯಲ್ಲಿ ಹಾಡುವುದು) ೩. ಸೂತಕಾರಿ (ಉಸ್ಸೆಂದು ನಿಟ್ಟುಸಿರಿಟ್ಟು ಹಾಡುವುದು) ೪. ಭೀತ (ಹೆದರಿಕೆಯಿಂದ ಹಾಡುವುದು) ೫. ಶಂಕಿತ (ಸಂದೇಹದಿಂದ ಹಾಡುವುದು) ೬. ಕಂಪಿತ (ದೇಹವನ್ನು ನಡುಗಿಸುತ್ತಾ ಹಾಡುವುದು) ೭. ಕರಾಳ (ಕೇಳುವವರಿಗೆ ಭಯವಾಗುವಂತೆ ಹಾಡುವುದು) ೮. ವಿಕಲ (ಸ್ವರಸ್ಥಾನ ಶುದ್ಧವಿಲ್ಲದೆ ಹಾಡುವುದು) ೯. ಕಾಕಿ (ಕಾಗೆಯಂತೆ ಹಾಡುವುದು) ೧೦. ವಿತಾಳ (ತಾಳವಿಲ್ಲದೆ ಹಾಡುವುದು) ೧೧. ಕರಭ (ಒಂಟೆಯಂತೆ ಕತ್ತೆತ್ತಿ ಹಾಡುವುದು) ೧೨. ಉದ್ಘಟ (ಮೇಕೆಯಂತೆ ಕಂಠ ನಡುಗಿಸಿ ಹಾಡು ವುದು) ೧೩. ಮಂಭಕ (ಕತ್ತಿನ ನರಗಳನ್ನು ಉಬ್ಬಿಸಿ ಹಾಡುವುದು) ೧೪. ಕುಂಭಕ (ಗಲ್ಲ ಉಬ್ಬಿಸಿ ಹಾಡುವುದು) ೧೫. ವಕ್ರಿ (ಕತ್ತು ಕೊಂಕಿಸಿ ಹಾಡುವುದು) ೧೬. ಪ್ರಸಾರ (ಅವಯವಗಳ ಚೇಷ್ಟೆ ಮಾಡಿ ಹಾಡುವುದು) ೧೭. ವಿನಿಮೀಲಕ (ಕಣ್ಣುಮುಚ್ಚಿ ಹಾಡುವುದು) ೧೮. ವಿರಸ (ರಸವಿಹೀನವಾಗಿ ಹಾಡುವುದು) ೧೯. ಅಪಸ್ವರಿ (ಶ್ರುತಿಸ್ಥಾನ ಬಿಟ್ಟು ಹಾಡುವುದು) ೨೦. ಅವ್ಯಕ್ತ (ಅರ್ಥಹೀನನಾಗಿ ಹಾಡುವುದು) ೨೧. ಸ್ಥಾನಭ್ರಷ್ಟ (ತ್ರಿಸ್ಥಾಯಿಗಳ ಸ್ವರಸ್ಥಾನಗಳನ್ನು ಬಿಟ್ಟು ಹಾಡು ವುದು) ೨೨. ಅವ್ಯವಸ್ಥಿತ (ಗಾನಪದ್ಧತಿ ಬಿಟ್ಟು ಮನಬಂದಂತೆ ಹಾಡು ವುದು) ೨೩. ಮಿಶ್ರ (ರಾಗಗಳನ್ನು ಬೆರೆಸಿ ಹಾಡುವುದು) ೨೪. ಅನವಧಾನ (ಗಮಕ ಸ್ವರೂಪ ತಿಳಿಯದೆ ಹಾಡುವುದು) ೨೫. ಅನು ನಾಸಿಕ (ಮೂಗಿನಲ್ಲಿ ಹಾಡುವುದು). ಸಂಗೀತದಲ್ಲಿ ಇಷ್ಟೊಂದು ದೋಷ ತುಂಬಿ ಹಾಡಿದರೆ ಅದು ಸಮ್ಯಕ್ ಗೀತೆಯಾಗಲು ಹೇಗೆ ಸಾಧ್ಯ? ಇನ್ನು ಅದು ಸಾಧನೆಯಾಗಿ ಭಗವಂತನ ಬಳಿಗೆ ಒಯ್ಯು ವುದಂತೂ ಸಾಧ್ಯವೇ ಇಲ್ಲ.

ಆದ್ದರಿಂದ ದಿವ್ಯ ಪರಂಪರೆಯ ಭವ್ಯ ಭಾರತೀಯ ಸಂಗೀತವು ಪರಮಾರ್ಥಪ್ರಾಪ್ತಿಗೆ ಸಹಾಯಕವಾಗುವುದು. ಒಂದೊಂದು ರಾಗವೂ ಒಂದೊಂದು ಭಾವರಸವನ್ನು ಹೊತ್ತು ಜಡವಾದ ಮನಸ್ಸಿಗೆ ಚೈತನ್ಯ ನೀಡುವುದು, ತಾಪದಿಂದ ಬೆಂದವರಿಗೆ ತಂಪನ್ನು ನೀಡುವುದು, ನೊಂದ ಜೀವಿಗಳಿಗೆ ಸಾಂತ್ವನ ನೀಡುವುದು, ಬಗ್ಗಡವಾದ ಮನಸ್ಸನ್ನು ತಿಳಿಮಾಡಿ, ಚಿತ್ತ ಚಾಂಚಲ್ಯವನ್ನು ನಿವಾರಿಸಿ ಪ್ರಶಾಂತಿ ಯನ್ನುಂಟುಮಾಡುವುದು. ಇವೆಲ್ಲಕ್ಕೂ ಮಿಗಿಲಾಗಿ ನಾಸ್ತಿಕತೆಯನ್ನು ಕಳೆದು, ಜಡತ್ವವನ್ನು ತೊಳೆದು ಭಕ್ತಿರಸವನ್ನುಕ್ಕಿಸಿ ಭಗವಂತನೆಡೆಗೆ ಒಯ್ದು ಬದ್ಧ ಜೀವನನ್ನು ಮುಕ್ತಿಪದಕ್ಕೇರಿಸುವುದು. ✡

---

'ಕ್ಷೇತ್ರ ಸಿದ್ಧಾಂತದ ಪ್ರಕಾರ (Field theory) ಪ್ರತಿಯೊಂದು ಕಣವೂ ಲಯಬದ್ಧವಾದ ಶಕ್ತಿವಿನ್ಯಾಸವನ್ನು ವ್ಯಕ್ತಪಡಿಸುತ್ತಾ ತನ್ನದೇ ಆದ ಸಂಗೀತವನ್ನು ಹಾಡುತ್ತಿದೆ. — ಫ್ರಿಟ್ಜಾಫ್ ಕಾಪ್ರ (Fritjof Capra)